ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರವಿ ಮಳಮಠ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಪಿ. ಸಂದೇಶ್

ಕೃಷ್ಣಾ ದಾಸ್ ಸರೋವ್ -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು

ರಿಟ್ ಅರ್ಜಿ (ಹೆಚ್ಸಿ)ಸಂಖ್ಯೆ: 49/2019, ದಿನಾಂಕ 28 ನೇ ಜೂನ್, 2019.

ತೀರ್ಪು

ನ್ಯಾಯಮೂರ್ತಿ ಶ್ರೀ ರವಿ ಮಳಿಮಠ್:

ಇದರಲ್ಲಿನ ಅರ್ಜಿದಾರಳು, ಬಂಧಿಯಾಗಿರುವ ಶ್ರೀ ರಜನೀಶ್ ಕುಮಾರ್ ಸರೋಹ್ ಅವರ ಪತ್ನಿ, ಅರ್ಜಿದಾರಳು ಬಂಧಿಯ ಜೀವನ, ಕ್ಷೇಮಾಭಿವೃದ್ಧಿ ಮತ್ತು ವೈಯಕ್ತಿಕ ಸ್ವಾತಂತ್ರ್ಯದಲ್ಲಿ ಹಿತಾಸಕ್ತಿಯುಳ್ಳವಳಾಗಿದ್ದಾಳೆ.ದಿನಾಂಕ: 05.03.2019 ರಂದು ಬಂಧಿಗೆ ಬಂಧನದ ಕಾರಣಗಳನ್ನು ಮತ್ತು ಆದೇಶವನ್ನು ಜಾರಿ ಮಾಡಲಾಯಿತು.ಆತನಿಗೆ ಸಂಬಂಧಪಟ್ಟ ದಸ್ತಾವೇಜುಗಳನ್ನು ಸಹ ಒದಗಿಸಲಾಯಿತು.ಹಿರಿಯ ಪೊಲೀಸ್ ವರಿಷ್ಠಾಧಿಕಾರಿ, ಕೇಂದ್ರ ಬಂದೀಖಾನೆ, ಬೆಂಗಳೂರು ಇವರ ಮೂಲಕ ಬಂಧನದ ಆದೇಶದ ವಿರುದ್ಧ ಬಂಧಿಸುವ ಪ್ರಾಧಿಕಾರಿಗೆ ಮನವಿ ಮಾಡಿಕೊಳ್ಳಲು ಆತನು ಹಕ್ಕುಳ್ಳವನಾಗಿದ್ದಾನೆಂದು ಸಹ ಆತನಿಗೆ ತಿಳಿಸಲಾಗಿತ್ತು.ತದನುಸಾರವಾಗಿ,ದಿನಾಂಕ: 29.03.2019 ರಂದು ಆತನು ತನ್ನ ಮನವಿಯನ್ನು ಸಲ್ಲಿಸಿದನು. ಈ ರಿಟ್ ಅರ್ಜಿಯೊಂದಿಗಿನ ಅನುಬಂಧ- ಇ 124 ಕೃಷ್ಣಾ ದಾಸ್ ಸರೋವ್ -ವಿರುದ್ಧ ಕರ್ನಾಟಕ ಸರ್ಕಾರ ಮತ್ತು ಇತರರುಇದರಲ್ಲಿರುವದಿನಾಂಕ: 04.04.2019 ರ ಆದೇಶದ ಮೂಲಕ ಸದರಿ ಮನವಿಯನ್ನು ತಳ್ಳಿಹಾಕಲಾಯಿತು.ಆ ಹಂತದಲ್ಲಿ, ಬಂಧನದ ಆದೇಶವನ್ನು ರದ್ದುಗೊಳಿಸಲು ಕೋರಿ ಪ್ರಸಕ್ತ ರಿಟ್ ಅರ್ಜಿಯನ್ನು ಸಲ್ಲಿಸಲಾಯಿತು.

2. ರಾಜ್ಯಕ್ಕೆ ನೋಟೀಸುಗಳನ್ನು ಜಾರಿಗೊಳಿಸಲಾಯಿತು.ಈ ನಡುವೆ, ಸಲಹಾ ಮಂಡಳಿಯುದಿನಾಂಕ: 06.05.2019 ರಂದು ಅದರ ವರದಿಯನ್ನು ಸಲ್ಲಿಸಿತು.ತರುವಾಯ, ರಾಜ್ಯವುದಿನಾಂಕ: 08.05.2019 ರ ಆದೇಶದ ಮೂಲಕ ಬಂಧನದ ಆದೇಶವನ್ನು ಸ್ಥಿರೀಕರಿಸಿ ಆದೇಶವನ್ನು ಹೊರಡಿಸಿತು.

3. (ಎ) ಬಂಧನದ ಕಾರಣಗಳು ಹಾಗೂ ಬಂಧನದ ಆದೇಶಗಳೆರಡೂ ಕಾನೂನುಬಾಹಿರವಾಗಿವೆ; ಬಂಧನದ ಆದೇಶವನ್ನು ಸಮರ್ಥಿಸುವ ಯಾವುದೇ ಕಾರಣಗಳಿರುವುದಿಲ್ಲ ಎಂದು ಶ್ರೀ ಕಿರಣ್ ಎಸ್. ಜವಳಿ, ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ವಾದಿಸಿದ್ದಾರೆ.ಸೂಕ್ತ ಪ್ರಾಧಿಕಾರವು ಮನವಿಯನ್ನು ಪರಿಗಣಿಸದಿರುವ ಪ್ರಶ್ನೆಯ ಬಗ್ಗೆ ಅವರು ಪ್ರಮುಖವಾಗಿ ವಾದಿಸಿದ್ದಾರೆ.ಆತನಿಗೆ ಒದಗಿಸಿದ ಬಂಧನದ ಕಾರಣಗಳಿಗನುಸಾರವಾಗಿ, ಬಂಧನದ ಆದೇಶದ ವಿರುದ್ಧ ಬಂಧಿಸುವ ಪ್ರಾಧಿಕಾರಿಗೆ ಮನವಿಯನ್ನು ಸಲ್ಲಿಸಲು ಆತನು ಹಕ್ಕುಳ್ಳವನಾಗಿದ್ದನು.ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಗೃಹ ಇಲಾಖೆ, ಬೆಂಗಳೂರು ಇವರು ಬಂಧನ ಪ್ರಾಧಿಕಾರಿಯಾಗಿರುವರು.ಬಂಧಿಯು, ಸದರಿ ಅಧಿಕಾರಿಗೆ, ಎಂದರೆ ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ಮನವಿಯನ್ನು ಸಲ್ಲಿಸಿದ್ದಾನೆ.ಆದಾಗ, ಅನುಬಂಧ-ಇಯಲ್ಲಿರುವದಿನಾಂಕ: 04.04.2019 ರ ಆದೇಶದಲ್ಲಿ ಸರ್ಕಾರದ ಅಧೀನ ಕಾರ್ಯದರ್ಶಿ, ಗೃಹ ಇಲಾಖೆ (ಪೊಲೀಸ್

ಸೇವೆಗಳು-ಬಿ) ಇವರು ಮನವಿಯನ್ನು ತಿರಸ್ಕರಿಸಿದ್ದಾರೆ.ಆದುದರಿಂದ, ಬಂಧಿಸುವ ಪ್ರಾಧಿಕಾರಿಯು ಆತನಿಗೆ ಸಲ್ಲಿಸಿದ ಮನವಿಯನ್ನು ಪರಿಗಣಿಸಿರುವುದಿಲ್ಲವೆಂದು ಅವರು ವಾದಿಸಿದ್ದಾರೆ.ಗೊತ್ತುಪಡಿಸಿದ ಪ್ರಾಧಿಕಾರಿಯು ಯುಕ್ತವಾಗಿ ವಿವೇಚಿಸಿರುವುದಿಲ್ಲ ಮತ್ತು ಅವರು ಮನವಿಯನ್ನು ತಿರಿಸ್ಕರಿಸಿರುವುದಿಲ್ಲ ಎಂದು ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.

(ಬಿ) ತಮ್ಮ ಮೊಕದ್ದಮೆಯ ಸಮರ್ಥನೆಗಾಗಿ, ಸಂತೋಷ್ ಆನಂದ್-ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು ' ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದು, ಅದರಲ್ಲಿ ಮಾನ್ಯ ಸರ್ವೋಚ್ಚ ಚ ನ್ಯಾಯಾಲಯವು, ಯಾವ ಪ್ರಾಧಿಕಾರಕ್ಕೆ ಮನವಿಯನ್ನು ಸಲ್ಲಿಸಲಾಗಿತ್ತೋ ಆ ಪ್ರಾಧಿಕಾರಿಯ ಮನವಿಯನ್ನು ಪರಿಗಣಿಸಿರಲಿಲ್ಲವಾದ್ದರಿಂದ, ಭಾರತ ಸಂವಿಧಾನದ 22 ( 5) ನೇ ಅನುಚ್ಛೇದದ ಅಡಿಯಲ್ಲಿ ಸಾಂವಿಧಾನಿಕ ಸುರಕ್ಷತೆಯನ್ನು ಕಟ್ಟುನಿಟ್ಟಾಗಿ ಪಾಲಿಸಲಾಗಿದೆ ಅಥವಾ ಅನುಪಾಲಿಸಲಾಗಿದೆ ಎಂದು ಹೇಳಲಾಗುವುದಿಲ್ಲ ಎಂದು ತೀರ್ಪು ನೀಡಿದೆ.ತತ್ಪರಿಣಾಮವಾಗಿ, ಬಂಧಿಯ ಬಂಧನವನ್ನು ಕಾನೂನುಬಾಹಿರವೆಂದು ನಿರ್ಣಯಿಸಿ, ಬಂಧನದ ಆದೇಶವನ್ನು ರದ್ದುಪಡಿಸಲಾಯಿತು.

(ಸಿ) ಕಮಲೇಶ್ಕುಮಾರ್ ಈಶ್ವರ್ದಾಸ್ ಪಟೇಲ್ -ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಸಹ ಅವಲಂಬಿಸಲಾಗಿದ್ದು, 38 ನೇ ಕಂಡಿಕೆಗೆ ಸಂಬಂಧಿಸಿದಂತೆ ಈ ಕೆಳಗಿನಂತೆ ಓದಲಾಗಿದೆ:

"38. ಸಂವಿಧಾನದ 22 ( 5) ನೇ ಅನುಚ್ಛೇದದ ಉಪಬಂಧಗಳಿಗೆ ಮತ್ತು ಸಿಓಎಫ್ಇಪಿಓಎಸ್ (ಕಾಪಿಪೋಸ) ಅಧಿನಿಯಮ ಮತ್ತು ಪಿಐಟಿ ಎನ್ಡಿಪಿಎಸ್ ಅಧಿನಿಯಮ ಇವುಗಳ ಉಪಬಂಧಗಳನ್ನು ಗಮನದಲ್ಲಿರಿಸಿಕೊಂಡು ಕೇಳಲಾದ ಪ್ರಶ್ನೆಗೆ ಹೀಗೆ ಉತ್ತರಿಸಲಾಗಿದೆ:ಸಿಓಎಫ್ಇಪಿಓಎಸ್ (ಕಾಪಿಪೋಸ) ಅಧಿನಿಯಮದ 3 ನೇ ಪ್ರಕರಣ ಮತ್ತು ಪಿಐಟಿ ಎನ್ಡಿಪಿಎಸ್ ಅಧಿನಿಯಮದ ಅಡಿಯಲ್ಲಿ ಬಂಧನದ ಆದೇಶವನ್ನು ಈ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರವಾಗಲಿ ಅಥವಾ ರಾಜ್ಯ ಸರ್ಕಾರವಾಗಲಿ ವಿಶೇಷವಾಗಿ ಅಧಿಕೃತಗೊಳಿಸಿದ ಅಧಿಕಾರಿಯು ಹೊರಡಿಸಿದ್ದಲ್ಲಿ, ಬಂಧಿತ ವ್ಯಕ್ತಿಯು ಸದರಿ ಅಧಿಕಾರಿಗೆ ಮನವಿ ಮಾಡಿಕೊಳ್ಳುವ ಹಕ್ಕನ್ನು ಹೊಂದಿರುತ್ತಾನೆ ಮತ್ತು ಸದರಿ ಅಧಿ ಕಾರಿಯು, ಸದರಿ ಮನವಿಯನ್ನು ಪರಿಗಣಿ ಸಲು ಬಾಧ್ಯನಾಗಿರುತ್ತಾನೆ ಹಾಗೂ ಹಾಗೆ ಮಾಡಲು ಆತನು ವಿಫಲನಾಗುವುದು, ಬಂಧನದ ಆದೇಶದ ವಿರುದ್ಧ ಮನವಿ ಮಾಡಿಕೊಳ್ಳಲು ಬಂಧಿತ ವ್ಯಕ್ತಿಗೆ ಪ್ರದತ್ತವಾದ ಹಕ್ಕಿನ ನಿರಾಕರಣೆಯಾಗುತ್ತದೆ.ಬಂಧಿಯ ಹಕ್ಕಿಗೆ, ರಾಜ್ಯ ಸರ್ಕಾರವು ವಿಶೇಷವಾಗಿ ಅಧಿಕೃತಗೊಳಿಸಿದ ಅಧಿಕಾರಿಯು ಹೊರಡಿಸಿದ ಬಂಧನದ ಆದೇಶವಾಗಿದ್ದಲ್ಲಿ ಮತ್ತು ಕೇಂದ್ರ ಸರ್ಕಾರವು ವಿಶೇಷವಾಗಿ ಅಧಿಕೃತಗೊಳಿಸಿದ ಅಧಿಕಾರಿಯು ಹೊರಡಿಸಿದ ಬಂಧನದ ಆದೇಶವಾಗಿದ್ದಲ್ಲಿ, ಬಂಧಿಯ ಈ ಹಕ್ಕು ರಾಜ್ಯ ಸರ್ಕಾರಕ್ಕೆ ಮತ್ತು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವ ಹೆಚ್ಚುವರಿ ಹಕ್ಕಾಗಿರುತ್ತದೆ ಮತ್ತು ಅದನ್ನು ಯುಕ್ತವಾಗಿ ಪರಿಗಣಿಸಬೇಕಾಗುತ್ತದೆ.ಮನವಿ ಮಾಡಿಕೊಳ್ಳುವ ಈ ಹಕ್ಕು, ಅವಶ್ಯವಾಗಿ, ಅಂಥ ಮನವಿ ಮಾಡಿಕೊಳ್ಳಲು ಬಂಧನಕ್ಕೊಳಗಾದ ವ್ಯಕ್ತಿಗೆ ಶಕ್ತವಾಗುವಂತೆ ಬಂಧನದ ಕಾರಣಗಳೊಂದಿಗೆ ಬಂಧನದ ಆದೇಶವನ್ನು ಆತನಿಗೆ ಜಾರಿಗೊಳಿಸಿದ ಸಮಯದಲ್ಲಿ, ಅದನ್ನು ಹೊರಡಿಸಿದ ಪ್ರಾಧಿಕಾರಿಗೆ ಮನವಿ ಸಲ್ಲಿಸುವ ಆತನ ಹಕ್ಕಿನ ಮಾಹಿತಿಯನ್ನು ಆತನಿಗೆ ತಿಳಿಸಬೇಕೆ ಂ ಬುದನ್ನು ಒಳಗೊಂಡಿದೆ ಹಾಗೂ ಹಾಗೆ ಮಾಡಲು ವಿಫಲವಾಗುವುದು, ಮನವಿ ಸಲ್ಲಿಸಲು ಬಂಧಿತ ವ್ಯಕ್ತಿಗಿರುವ ಹಕ್ಕಿನ ನಿರಾಕರಣೆಯಲ್ಲಿ ಪರಿಣಮಿಸುವುದು. "1

4. (ಎ) ಪ್ರತಿವಾದಿಗಳ ಪರ ಹಾಜರಾದ ಮಾನ್ಯ ಹೆಚ್ಚುವರಿ ಅಡ್ವಕೇಟ್ ಜನರಲ್ರವರಾದ ಶ್ರೀ ಸಂದೇಶ್ ಜೆ. ಚೌಟರವರು ಸದರಿ ವಾದದ ಬಗ್ಗೆ ತಕರಾರು ಎತ್ತಿದ್ದಾರೆ.ಸಲ್ಲಿಸಲಾದ ಆಕ್ಷೇಪಣೆಗಳ ಹೇಳಿಕೆಯನ್ನು ಅವರು ಅವಲಂಬಿಸಿದ್ದಾರೆ.ಕಾನೂನಿಗನುಸಾರವಾಗಿ ಗಮನ ನೀಡಿ ಬಂಧಿಯ ಮನವಿಯನ್ನು ತಿರಸ್ಕರಿಸಲಾಗಿದೆ ಎಂದು ಅವರು ವಾದಿಸಿದ್ದಾರೆ.ಅವರು ಪರಿಗಣನೆಗಾಗಿ ದಾಖಲೆಗಳನ್ನು ಸಹ ಮಂಡಿಸಿದ್ದಾರೆ.

(ಬಿ) ಭಾರತ ಒಕ್ಕೂಟ ಮತ್ತು ಇತರರು -ವಿರುದ್ಧ ಸಲೀನಾ (2016) 3 ಎಸ್ಸಿಸಿ 437 ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿ, ಯುಕ್ತ ವಿವೇಚನೆಯನ್ನು ಬಳಸುವ ಮತ್ತು ಆದೇಶವನ್ನು ಸಂವಹನ ಮಾಡುವ ಪ್ರಶ್ನೆಯು, ಕಾನೂನಿನ ಅಗತ್ಯತೆಯನ್ನು ಈಡೇರಿಸಬೇಕೆಂದು ಅವರು ವಾದಿಸಿದರು.ಪ್ರಸ್ತುತ ಮೊಕದ್ದಮೆಯಲ್ಲಿ, ಸಂಬಂಧಪಟ್ಟ ಹೆಚ್ಚುವರಿ ಮುಖ್ಯ ಕಾವ್ಯದರ್ಶಿಯವರು ಯುಕ್ತ ವಿವೇಚನೆಯನ್ನು ಮಾಡಿದ್ದಾರೆ.ಆದುದರಿಂದ, ಅಧೀನ ಕಾರ್ಯದರ್ಶಿಯ ಹೆಸರಿನಲ್ಲಿ ಆದೇಶವನ್ನು ಹೊರಡಿಸಲಾಗಿದೆ ಎಂಬ ಕಾರಣ ಮಾತ್ರದಿಂದಲೇ ಬಂಧನದ ಆದೇಶವನ್ನು ನಿರರ್ಥಕಗೊಳಿಸಲಾಗುವುದಿಲ್ಲವೆಂದೂ ವಾದಿಸಿದ್ದಾರೆ.

5. ಮಾನ್ಯ ನ್ಯಾಯವಾದಿಗಳ ವಾದಗಳನ್ನು ಆಲಿಸಲಾಯಿತು.

6. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಅವಲಂಬಿಸಿದ ತೀರ್ಪಿಗೆ ಸ ೦ ಬ ೦ ಧಪಟ್ಟಿರುವಷ್ಟರಮಟ್ಟಿಗೆ, ಇದು ಈಗಾಗಲೇ ಇತ್ಯರ್ಥಗೊಂಡಿರುವ ಕಾನೂನಾಗಿದೆ.ಗೊತ್ತುಪಡಿಸಿದ ಪ್ರಾಧಿಕಾರಕ್ಕೆ ಸಲ್ಲಿಸಿದ ಮನವಿಯನ್ನು, ಆ ಪ್ರಾಧಿಕಾರಿ ಮಾತ್ರವೇ ಅಗತ್ಯವಾಗಿ ಪರಿಗಣಿಸಬೇಕಾಗುತ್ತದೆ.ಯಾರೇ ಇತರ ಪ್ರಾಧಿಕಾರಿಯು ಮಾಡಿದ ಪರಿಗಣನೆಯು, ಬಂಧನದ ಆದೇಶವನ್ನು ನಿರರ್ಥಕಗೊಳಿಸುತ್ತದೆ.ಆದಾಗ್ಯೂ, ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಭಾರತ ಒಕ್ಕೂಟ ಮತ್ತು ಇತರರು ವಿರುದ್ಧ ಸಲೀನಾ (ಮೇಲಿನಂತೆ) ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದಾರೆ.ಈ ತೀರ್ಪನ್ನು ಚ ನಾವು ಸವಿವರವಾಗಿ ಪರಿಶೀಲಿಸಿದ್ದೇವೆ.ಸದರಿ ತೀರ್ಪಿನಲ್ಲಿ ಪರಿಶೀಲನೆಗಾಗಿ ಇಂಥಹುದೇ ಪ್ರಶ್ನೆಯು ಉದ್ಭವಿಸಿತ್ತು.ಮಾನ್ಯ ಕೇರಳ ಉಚ್ಚ ನ್ಯಾಯಾಲಯವು, ಸಕ್ಷಮ ಪ್ರಾಧಿಕಾರಿಯ ಅಧೀನ ಪ್ರಾಧಿಕಾರಿಯು ಮನವಿಯನ್ನು ನಿರಾಕರಿಸಿರುವುದರಿಂದ, ಸಾಂವಿಧಾನಿಕ ಅಗತ್ಯತೆಯನ್ನು ಈಡೇರಿಸಿಲ್ಲವೆಂಬ ಕಾರಣದ ಮೇಲೆ ಬಂಧನದ ಆದೇಶವನ್ನು ತಳ್ಳಿಹಾಕಿದೆ.ಈ ಆದೇಶವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಪ್ರಶ್ನಿಸಲಾಯಿತು.ಉಚ್ಚ ನ್ಯಾಯಾಲಯದ ಆದೇಶವನ್ನು ಪರಿಗಣಿಸಿ, ಚ ಮೊಕದ್ದಮೆಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ, ಅದರಲ್ಲಿ, ವಿಶೇಷ ಕಾರ್ಯದರ್ಶಿ-ಮತ್ತು-ಮಹಾ ನಿರ್ದೇಶಕರು, ಕೇಂದ್ರೀಯ ಆರ್ಥಿಕ ವಿಚಕ್ಷಣಾ ಬ್ಯೂರೋ ಹಣಕಾಸು ಮಂತ್ರಾಲಯ, ರಾಜಸ್ವ ಇಲಾಖೆ ಇವರು ಸಕ್ಷಮ ಪ್ರಾಧಿಕಾರಿಯಾಗಿದ್ದರು.ಆದಾಗ್ಯೂ, ದಾಖಲೆಗಳನ್ನು ಪರಿಶೀಲಿಸಿದ ನಂತರ, ಸಕ್ಷಮ ಪ್ರಾಧಿಕಾರಿಯ ಆದೇಶದ 29 ನೇ ಕಂಡಿಕೆಯಲ್ಲಿ ನಿರೂಪಿಸಿದಂತೆ ಹೇಳಿದ್ದಾರೆ ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಕಂಡುಬಂದಿದ್ದು, ಅದನ್ನು ಈ ಚ ಕೆಳಗಿನಂತೆ ಓದಲಾಗಿದೆ:

" ನಾನು ಮನವಿಯನ್ನು ಅವಲೋಕಿಸಿದ್ದೇನೆ.ಸಿಓಎಫ್ಇಪಿಓಎಸ್ (ಕಾಪಿಸ) ಅಧಿನಿಯಮದ 11 ನೇ ಪ್ರಕರಣದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸಲು ಸಾಕಷ್ಟು ಕಾರಣಗಳು ನನಗೆ ಕಂಡುಬರುತ್ತಿಲ್ಲ.ಮನವಿಯನ್ನು ತಿರಸ್ಕರಿಸಲಾಗಿದೆ. "

ಸಕ್ಷಮ ಪ್ರಾಧಿಕಾರಿ ಹೊರಡಿಸಿದ ಈ ಆದೇಶವನ್ನು ಅಧೀನ ಕಾರ್ಯದರ್ಶಿಯು ಹೊರಡಿಸಿದ್ದಾರೆ.ಆದುದರಿಂದ, ಸಕ್ಷಮ ಪ್ರಾಧಿಕಾರಿಗೆ ಸಂಬಂಧಿಸಿದಷ್ಟರಮಟ್ಟಿಗೆ ಈ ಕುರಿತು ಅವರು ಗಮನ ನೀಡಿರುತ್ತಾರೆ ಎಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿದೆ.ಇದನ್ನು ತೀರ್ಪಿನಲ್ಲಿ ವಿವರಿಸಲಾಗಿದೆ.ಸಕ್ಷಮ ಪ್ರಾಧಿಕಾರಿಯವರು, ಅವರ ಗಮನ ನೀಡಿರುವುದನ್ನು ಸಮರ್ಥಿಸುವ ಮೂಲಕ ಕಾರಣಗಳನ್ನು ವಿಸ್ತರಿಸುವ ಅಗತ್ಯವಿಲ್ಲ.ಆದೇಶವು, ಸಕ್ಷಮ ಪ್ರಾಧಿಕಾರಿಯು ಗಮನ ನೀಡಿರುವುದನ್ನು ಸ್ವತಃ ವೇದ್ಯಗೊಳಿಸುತ್ತದೆ.ಆದುದ್ದರಿಂದ, ಬಂಧನದ ಆದೇಶವನ್ನು ಎತ್ತಿಹಿಡಿಯಲಾಗಿದೆ.

7. ಆದಾಗ್ಯೂ, ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಅದನ್ನು ವಾಸ್ತವದಲ್ಲಿ ಅನ್ವಯಿಸಲಾಗುವುದಿಲ್ಲ.ನಾವು ದಾಖಲೆಗಳನ್ನು ವಿವರವಾಗಿ ಪರಿಶೀಲಿಸಿದ್ದೇವೆ.ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ತಮ್ಮ ವಿವೇಚನೆಯನ್ನು ಬಳಸಿದ್ದಾರೆಂಬುದನ್ನು ನಿರೂಪಿಸಲು, ಅವರು ಹೊರಡಿಸಿದ ಯಾವುದೇ ಆದೇಶವಿರುವುದಿಲ್ಲ.ಅರ್ಜಿದಾರರ ಮನವಿಯನ್ನು ತಳ್ಳಿಹಾಕಿದ್ದನ್ನು, ಸರ್ಕಾರದ ಅಧೀನ ಕಾವ್ಯದರ್ಶಿಯವರು ತಿಳಿಸಿದ್ದಾರೆ.ಒಪ್ಪಿಕೊಂಡಿರುವಂತೆ, ಅವರು ಸಕ್ಷಮ ಪ್ರಾಧಿ ಕಾರಿಯಲ್ಲ.ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯು ಸಕ್ಷಮ ಪ್ರಾಧಿಕಾರಿಯಾಗಿರುವರು.ಅರ್ಜಿದಾರರು ಸಲ್ಲಿಸಿದ ಮನವಿಗೆ ಗಮನ ನೀಡಬೇಕಾದವರು ಅವರು ಮಾತ್ರ.ಅಷ್ಟರಮಟ್ಟಿಗೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಯಾವುದೇ ಆದೇಶವನ್ನು ಹೊರಡಿಸಿರುವುದನ್ನು ಸೂಚಿಸುವ ದಾಖಲೆಗಳಿಲ್ಲ.ಆದಾಗ್ಯೂ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೇಲೆ ಹೇಳಿದ ತೀರ್ಪಿನಲ್ಲಿ, ಸಕ್ಷಮ ಚ ಪ್ರಾಧಿಕಾರಿಯು, ಎಷ್ಟೇ ಚಿಕ್ಕ ಆದೇಶವಾಗಿರಲಿ ಅದರ ಮೂಲಕ ಅವರ ಗಮನವನ್ನು ನೀಡಬಹುದಾಗಿತ್ತು ಮತ್ತು ಮನವಿಯನ್ನು ತಿರಸ್ಕರಿಸಬಹುದಾಗಿತ್ತು.ಇದರಲ್ಲಿನ ಸಕ್ಷಮ ಪ್ರಾಧಿಕಾರಿಯು ತಮ್ಮ ವಿವೇಚನೆಯನ್ನು ಬಳಸದೆ ಇರುವುದರಿಂದ, ಬಂಧನದ ಆದೇಶವನ್ನು ಸಮರ್ಥಿಸಲಾಗುವುದಿಲ್ಲ.

8. ಆದುದರಿಂದ, ವಿವಾದ ಕುರಿತ ಕಾನೂನು ಈಗಾಗಲೇ ಸುಸ್ಥಾಪಿತವಾಗಿರುವ ಸಂಗತಿಯಾಗಿದೆ.ಬಂಧಿಯ ಮನವಿಯನ್ನು ಸಕ್ಷಮ ಪ್ರಾಧಿಕಾರಿ ಮಾತ್ರವೇ ತಮ್ಮ ವಿವೇಚನೆಯನ್ನು ಬಳಸಿ ಪರಿಗಣಿಸಬೇಕಾಗುತ್ತದೆ.ಸಕ್ಷಮ ಪ್ರಾಧಿಕಾರಿಯನ್ನು ಹೊರತುಪಡಿಸಿ ಇತರ ಯಾರೇ ಪ್ರಾಧಿಕಾರಿಯು ಮನವಿಯನ್ನು ತಿರಸ್ಕರಿಸಿದ್ದರೆ, ಮನವಿಯ ಅಂಥ ತಿರಸ್ಕರಣೆಯನ್ನು, ಕಾನೂನಿನ ದೃಷ್ಟಿಯಲ್ಲಿ ಸಿಂಧುವಾದ ತಿರಸ್ಕರಣೆ ಎಂದು ಪರಿಗಣಿಸಲಾಗುವುದಿಲ್ಲ.ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಯಿಂದ ಯಾವುದೇ ತಿರಸ್ಕರಣೆ ಆದೇಶವಿಲ್ಲದಿದ್ದಲ್ಲಿ, ಮನವಿಯನ್ನು ಪರಿಗಣಿಸಿರುವುದಿಲ್ಲವೆಂದು ನಿರ್ಣಯಿಸಬೇಕಾಗುತ್ತದೆ.

9. ಈ ಸಂದರ್ಭಗಳ ಮೇರೆಗೆ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ವಾದಿಸಿದ ಇತರ ಕಾರಣಗಳನ್ನು ಪರಿಗಣಿಸುವುದು ಅವಶ್ಯವೆಂದು ನಮಗೆ ಕಂಡುಬರುತ್ತಿಲ್ಲ.ಮೇಲೆ ಹೇಳಿದ ಅಭಿಪ್ರಾಯಗಳ ದೃಷ್ಟಿಯಿಂದ, ಇತರ ವಾದಗಳನ್ನು ಪರಿಗಣಿಸುವ ಅವಶ್ಯಕತೆ ಇಲ್ಲವೆಂದು ಈರ್ವರೂ ನ್ಯಾಯವಾದಿಗಳು ಸಹ ನಿವೇದಿಸಿಕೊಂಡಿದ್ದಾರೆ.

10. ಮೇಲೆ ಹೇಳಿದ ಕಾರಣಗಳಿಗಾಗಿ, ರಿಟ್ ಅರ್ಜಿ ಬಂಧಿ ಪ್ರತ್ಯಕ್ಷೀಕರಣ (ಹೇಬಿಯಸ್ ಕಾರ್ಪಸ್)ಸಂಖ್ಯೆ: 49/2019 ನ್ನು ಪುರಸ್ಕರಿಸಲಾಗಿದೆ.ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ಬೆಂಗಳೂರು ಇವರು ಹೊರಡಿಸಿದ ಹೆಚ್ಡಿ 3 ಎಸ್ಪಿಎಫ್ 2019 ಸಂಖ್ಯೆಯನ್ನು ಹೊಂದಿರುವದಿನಾಂಕ: 21.02.2019 ರ ಬಂಧನದ ಆದೇಶವನ್ನು ಈ ಮೂಲಕ ತಳ್ಳಿಹಾಕಲಾಗಿದೆ.

ಬಂಧಿಯು, ಎಂದರೆ ಶ್ರೀ ರಜನೀಶ್ ಕುಮಾರ್ ಸರೋಹ್, ತಂದೆ:ಶ್ರೀ ಉಮೇದ್ ಸಿಂಗ್ ಸರೋಹ್ ಅವರನ್ನು, ಯಾವುದೇ ಇತರ ಮೊಕದ್ದೆಮಯಲ್ಲಿ ಗಳಲ್ಲಿ ಅವರ ಅಗತ್ಯವಿಲ್ಲದಿದ್ದರೆ, ಈ ಕೂಡಲೇ ಅಭಿರಕ್ಷೆಯಿಂದ ಬಿಡುಗಡೆ ಮಾಡಬೇಕೆಂದು ನಿರ್ದೇಶಿಸಲಾಗಿದೆ.

ಬಂದೀಖಾನೆ ಪ್ರಾಧಿಕಾರಿಗಳು, ಕೇಂದ್ರ ಬಂದೀಖಾನೆಗಳು, ಪರಪ್ಪನ ಅಗ್ರಹಾರ, ಬೆಂಗಳೂರು ಇವರಿಗೆ ಸೂಕ್ತ ಕ್ರಮಕಾಗಿ ಈ ಆದೇಶದ ಪರಿಣಾಮಕಾರಿ ಭಾಗವನ್ನು ಕಳುಹಿಸಲು ರಿಜಿಸ್ಟ್ರಿ ಅವರಿಗೆ ನಿರ್ದೇಶಿಸಲಾಗಿದೆ.

ಇತ್ಯರ್ಥದಲ್ಲಿದ್ದ ವಾದಕಾಲೀನ ಅರ್ಜಿಸಂಖ್ಯೆ: 2/2019 ನ್ನು ತಳ್ಳಿಹಾಕಲಾಗಿದೆ.